## ಕೆನಡಾ -ಅಮೇರಿಕಾ ಕನ್ನಡ ಸಮ್ಮೇಳನದ ಬಗ್ಗೆ ಕರ್ನಾಟಕದ ನ್ಯೂಸ್ ಪೇಪರಿನ ವರದಿ

ಕನ್ನಡ ಪ್ರಭ.
ಜೂನ್ 1, 1987
ಪುಟ 2.

# ಕೆನಡಾದಲ್ಲಿ ಅದ್ದೂರಿ ಕನ್ನಡ ಸಮ್ಮೇಳನ

ಕೆನಡಾ, ಮೇ 31—ಕೆನಡಾದ ಟೊರಾಂಟೊ ನಗರದಲ್ಲಿ ಇದೇ 23, 24 ರಂದು 'ಕೆನಡಾಗೆ ಅಮೆರಿಕ ಕನ್ನಡ ಸಮ್ಮೇಳನ' ಯಶಸ್ವಿಯಾಗಿ ನಡೆಯಿತು.

ಕೆನಡಾ, ಅಮೇರಿಕಾ ಮತ್ತು ಭಾರತ ದಿಂದಲೂ ಸುಮಾರು 500ಕ್ಕೂ ಹೆಚ್ಚು ಕನ್ನಡಿಗರು ಬಂದು ಸಕ್ರಿಯವಾಗಿ ಭಾಗವಹಿಸಿದ್ದ ಈ ಅದ್ದೂರಿಯ ಸಮಾರಂಭವನ್ನು ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಉದ್ಘಾಟಿಸಿದರು.

ಕರ್ನಾಟಕದ ಕೈಗಾರಿಕಾ ಮಂತ್ರಿ ಜೆ.ಎಚ್. ಪಟೇಲ್ ಅವರು ಸಮ್ಮೇಳನದ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಕೆನಡದ ಒಂಟಾರಿಯೊ ಪ್ರಾಂತ್ಯ ಸರಕಾರದ ಪ್ರತಿನಿಧಿಗಳಾಗಿ ಅಲ್ಲಿಯ ಸಾಲಿಸಿಟರ್ ಜನರಲ್ ಕೆನ್ ಕೀಯರ್ಸ್ ಅವರು ಸಮಾವೇಶದಲ್ಲಿ ಉಪಸ್ಥಿತರಿದ್ದು ಉಪನ್ಯಾಸ ಮಾಡಿದರು.

ಕನ್ನಡ ಜನಪ್ರಿಯ ಸಿನಿಮಾ-ನಾಟಕರಂಗದ ಕಲಾವಿದ ಶಂಕರನಾಗ್ ಮತ್ತು ಅನಂತನಾಗ್ ಅವರು ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದರು. 'ಅಮೆರಿಕನ್ನಡ' ಪತ್ರಿಕೆಯ ಮುಖ್ಯ ಸಂಪಾದಕ ಎಸ್.ಕೆ. ಹರಿಹರೇಶ್ವರ ಅವರು 'ಅಗ್ರಭಾಷಣ' ಮಾಡಿದರು.

ಉತ್ತರ ಅಮೆರಿಕದಲ್ಲಿ ಹಲವು ಸ್ವಪ್ರೇರಣೆಯಿಂದ ಕನ್ನಡ ಸೇವೆ ಮಾಡುತ್ತಿರುವ ಐದು ಜನ ಕನ್ನಡಿಗರು—ಮಾಂಟ್ರಿಯಲ್ಲಿನ ಪ್ರೊಫೆಸರ್ ಶ್ರೀಕಂಠಸ್ವಾಮಿ, ಪೆನ್ಸಿಲ್ವೇನಿಯಾದ ಹರಿಹರೇಶ್ವರ, ಪಿಟ್ಸ್‌ಬರ್ಗ್‌ನ ಚನ್ನರಸಪ್ಪ, ಡೆಲವೇರ್‌ನ ಬೆಂಗಳೂರು ಲಕ್ಷ್ಮಣ ಮತ್ತು ವಾಷಿಂಗ್ಟನ್, ಡಿ.ಸಿ. ಯ ಶ್ರೀಮತಿ ವಿಮಲಾ ಚನ್ನಬಸಪ್ಪ ಅವರಿಗೆ ಸನ್ಮಾನಪತ್ರ ನೀಡಿ ಶಾಲು ಹೊದಿಸಿ ಸನ್ಮಾನಿಸಲಾಯಿತು.

ಕೆನಡ ಮತ್ತು ಯು.ಎಸ್.ಎ. ಯ ಹಲವಾರು ಕನ್ನಡ ಸಂಘಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದವು. ಸಮ್ಮೇಳನದ ಅಂಗವಾಗಿ ಉತ್ತರ ಅಮೆರಿಕದ ಕನ್ನಡ ಪುಸ್ತಕ ಬರಹಗಾರರು, ಬೇಲೂರು ಹಳೇಬೀಡಿನ ವೈಭವ, ಕನ್ನಡಿಗರ ಕಲಾಕೃತಿಗಳು, ಕನ್ನಡ ಕಂಪ್ಯೂಟರೀಕರಣದ ಸಾಫ್ಟ್‌ವೇರ್‌ಗಳನ್ನೊಳಗೊಂಡ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಹಲವಾರು ವಿಚಾರ ಗೋಷ್ಠಿಗಳನ್ನು ನಡೆಸಿ—ಕನ್ನಡಿಗರು ಹೊರನಾಡ ಸಂಸ್ಕೃತಿಗಳಲ್ಲಿ ಹೊಂದಿಕೊಂಡು ಬೆಳೆಯುವ ಬಗ್ಗೆ, ಅವರ ಮಕ್ಕಳ ವ್ಯಕ್ತಿತ್ವ ಪೂರ್ಣವಾಗಿ ಬೆಳೆಯುವ ವಿಚಾರ ಇತ್ಯಾದಿಗಳ ವಿಷಯವಾಗಿ ವಿಚಾರಪೂರಿತ ಚರ್ಚಾಕೂಟಗಳನ್ನು ನಡೆಸಲಾಯಿತು.

ಸಾಂಸ್ಕೃತಿಕ ಕಾರ್ಯಕ್ರಮಗಳ ಕೊನೆಯ ಅಂಗವಾಗಿ ಟೊರಾಂಟೊ ಕನ್ನಡ ಸಂಘದವರು 'ಕುರುಡು ಕಾಂಚಾಣ' ಎಂಬ ನಾಟಕವನ್ನು ಅಭಿನಯಿಸಿದರು.

Indian Express
Bangalore
Monday June 1, 87
page 3.

# *Distinguished US Kannadigas honoured*

**Bangalore, May 31:** Five Kannadigas settled in North America who have done outstanding work for the community were honoured at the Canada-US Kannada Conference held in Toronto, Canada, last week-end, according to a press release.

Chief Minister Ramakrishna Hegde presented the awards to the distinguished Kannadigas. The conference was attended by Industries and Power Minister J. H. Patel and well-known Kannada screen personalities Anant Nag, Shankar Nag and T. S. Narasimhan.

The awardees were Prof. Srikanta Swamy of Montreal, Mr. S. K. Harihareswara of Pennysylvania, Mr. Bangalore T. Laxman of Delaware, Mr. K. R. Channarasappa of Pittsburgh and Mrs. Vimala Channabasappa of Washington D.C.

Mr. Hegde praised the Kannadigas in far-off places who strived to spread Kannada and the culture of Karnataka abroad. He stressed the need for the more affluent Kannadigas abroad to invest in industries in Karnataka.

Mr. Patel released a Kannada souvenir brought out on the occasion, while the Nag brothers spoke and sang songs.

As an adjunct to the two-day conference, a cultural programme and an exhibition of Kannada books and Karnataka handicrafts were also held in Toronto.

A number of workshops were held on subjects like integration of the western and eastern value systems, cultural duality, and youth and organisational development. The Toronto Kannada Sangha staged a Kannada play, "Kurudu Kanchana."